ಸಂಖ್ಯೆ: ಎಸ್.ಎಲ್.ಎ.ಓ.ಎಸ್.ಆರ್(ತು-ರಾ ರೈಲ್ವೆ) 22(1)/2015-16 ಭಾಗ-01
ಸಂಖ್ಯೆ: ಎಸ್.ಎಲ್.ಎ.ಓ.ಎಸ್.ಆರ್(ತು-ರಾ ರೈಲ್ವೆ) 22(2)/2015-16 ಭಾಗ-02

**ಆಡಳಿತಾಧಿಕಾರಿಗಳು**

**ತುಮಕೂರು-ರಾಯದುರ್ಗ ರೈಲ್ವೆ ಯೋಜನೆ, ತುಮಕೂರು ಜಿಲ್ಲೆ,**

**ಕಲಂ 16(2)ರನ್ವಯ ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕರಡು ಯಾದಿ.**

**ಗ್ರಾಮ:- ಪಾವಗಡ** **ಹೋಬಳಿ: ಕಸಬಾ** **ತಾಲ್ಲೂಕು: ಪಾವಗಡ**

## ಕರ್ನಾಟಕ ಸರ್ಕಾರ

## ತುಮಕೂರು-ರಾಯದುರ್ಗ ರೈಲ್ವೆ ಯೋಜನೆ

ತುಮಕೂರು-ರಾಯದುರ್ಗ ರೈಲ್ವೆ ಯೋಜನೆಯ ಬ್ರಾಡ್‌ಗೇಜ್ ಹಳಿ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳುತ್ತಿರುವ ಜಮೀನುಗಳ ಮಾಲೀಕರಿಗೆ ಪುನರ್‌ವಸತಿ ಹಾಗೂ ಪುನರ್ ನಿರ್ಮಾಣದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಅಧಿನಿಯಮ 2013 (The Right to Fair Compensation, Transparency in Land Acquisition Rehabilitation and Resettlement Act-2013).

ಜಿಲ್ಲೆ: ತುಮಕೂರು ತಾಲ್ಲೂಕು: ಪಾವಗಡ ಹೋಬಳಿ: ಕಸಬಾ ಗ್ರಾಮ: ಪಾವಗಡ

### ಕಲಂ 16(2) ರನ್ವಯ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕರಡು ಯಾದಿ.

16(2)ರನ್ವಯ ಪುನರ್‌ವಸತಿ ಹಾಗೂ ಪುನರ್‌ನಿರ್ಮಾಣ ಕರಡು ಯಾದಿಯನ್ನು ತಯಾರಿಸಿದ್ದು, ಕಲಂ 16(5)ರಡಿ ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮವನ್ನು ದಿನಾಂಕ: 19.05.2018ರಂದು ಜರುಗಿಸಲಾಗಿರುತ್ತದೆ. ಸಂಬಂಧಪಟ್ಟ ಭೂಮಾಲೀಕರ ಲಿಖಿತ ಆಕ್ಷೇಪಣೆಗಳು ಅಂದು ಸ್ವೀಕೃತವಾಗದೇ ಇರುವುದರಿಂದ ಕಲಂ 16(6)ರಡಿ ತಮ್ಮ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದೆ.

ವಿಶೇಷ ಭೂಸ್ವಾಧೀನಾಧಿಕಾರಿ,
ತುಮಕೂರು-ರಾಯದುರ್ಗ ಹಾಗೂ
ತುಮಕೂರು-ದಾವಣಗೆರೆ ರೈಲ್ವೆ ಯೋಜನೆ,
ತುಮಕೂರು

ಆಡಳಿತಾಧಿಕಾರಿಗಳು,
ಪುರ್‌ವಸತಿ ಮತ್ತು ಪುನರ್‌ನಿರ್ಮಾಣ,
ಹಾಗೂ ಅಪರ ಜಿಲ್ಲಾಧಿಕಾರಿ,
ತುಮಕೂರು

ಕರ್ನಾಟಕ ಸರ್ಕಾರ

**ತುಮಕೂರು-ರಾಯದುರ್ಗ ರೈಲ್ವೆ ಯೋಜನೆ**

ತುಮಕೂರು-ರಾಯದುರ್ಗ ರೈಲ್ವೆ ಯೋಜನೆ ಬ್ರಾಡ್‌ಗೇಜ್ ಹಳಿ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳುತ್ತಿರುವ ಜಮೀನುಗಳ ಮಾಲೀಕರಿಗೆ ಪುನರ್‌ವಸತಿ ಹಾಗೂ ಪುನರ್‌ನಿರ್ಮಾಣ ಸ್ವಾಧೀನ ಪ್ರಕ್ರಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಅಧಿನಿಯಮ-2013 (The Right to Fair Compensation, Transparency in Land Acquisition Rehabilitation and Resettlement Act-2013)

ಕಲಂ 16(2) ರನ್ವಯ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕರಡು ಯಾದಿ.

ಜಿಲ್ಲೆ: ತುಮಕೂರು ತಾಲ್ಲೂಕು:ಪಾವಗಡ ಹೋಬಳಿ: ಕಸಬಾ, ಗ್ರಾಮ: ಪಾವಗಡ

**ಪ್ರಸ್ತಾವನೆ:**

1. ಜನರಿಗೆ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕರಡು ಪರಿ ಯೋಜನೆ ಕುರಿತು ನಿಯಮಗಳಲ್ಲಿ ಉಪಬಂಧಿಸುವ ಅರಿವು ಮೂಡಿಸಲಾಗಿದೆ.
2. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಅಧಿನಿಯಮ-2013 ರನ್ವಯ ಕಲಂ 11(1)ರಲ್ಲಿ ದಿನಾಂಕ: 24.08.2017 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಲಾಗಿರುತ್ತದೆ.
3. ಪುನರ್‌ವಸತಿ ಮತ್ತು ಪುನರ್‌ನಿರ್ಮಾಣದ ಕರಡು ಯಾದಿಯನ್ನು ಸರ್ವೆ(ಸಂಯುಕ್ತ ಮೋಜಿಣಿ ಸರ್ವೆ) ಗಣತಿಯ ಸಮೀಕ್ಷಾ ವರದಿ, ವಂಶಾವಳಿ ಮತ್ತು ಕಲಂ 11(1)ರ ಅಧಿಸೂಚನೆಯ ಪ್ರಕಟಣೆಯನ್ನು ಆಧಾರವಾಗಿಟ್ಟುಕೊಂಡು ತಯಾರಿಸಲಾಗಿದೆ.
4. ಸದರಿ ಭೂಸ್ವಾಧೀನಕ್ಕೆ ಒಳಪಡುವ ಕ್ಷೇತ್ರದಲ್ಲಿ ಸಾರ್ವಜನಿಕ ಮತ್ತು ಸರ್ಕಾರಿ ಕಟ್ಟಡಗಳು ಒಳಪಟ್ಟಿರುವುದಿಲ್ಲ.
5. ಈ ಕುರಿತು ಯಾದಿಯ ಕಲಂ 16, 16(4), 16(5)ರನ್ವಯ ಕ್ಲೇಮು ಹಾಗೂ ಆಕ್ಷೇಪಣೆಗಳ ಕುರಿತು ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮಗಳನ್ನು ಏರ್ಪಡಿಸಿ ಸಂದರ್ಭಾನುಸಾರ ಬದಲಾವಣೆಗೆ ಒಳಪಡಿಸಿರುತ್ತದೆ.

6. ತುಮಕೂರು-ರಾಯದುರ್ಗ ರೈಲ್ವೆ ಯೋಜನೆಯಲ್ಲಿ ಸ್ವಾದೀನತೆಗೆ ಒಳಾಗದ ಕುಟುಂಬಗಳಿಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಹಾಗೂ ನ್ಯಾಯೋಚಿತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಅಧಿನಿಯಮ-2013 (The Right to Fair Compensation, Transparency in Land Acquisition Rehabilitation and Resettlement Act-2013) ಸದರಿ ಅಧಿನಿಯಮದ ಅನುಸೂಚಿ 2 ರ ಅನುಸಾರ ಹಾಗೂ ಕಲಂ 31 ರನ್ವಯ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಐತೀರ್ಪು ರಚಿಸುವ ಸಂದರ್ಭದಲ್ಲಿ 50% ಗಿಂತ ಹೆಚ್ಚು ಜಮೀನನ್ನು ಕಳೆದುಕೊಳ್ಳುವ ಭೂಮಾಲೀಕರ ಒಟ್ಟು ಹಿಡುವಳಿ ಮತ್ತು ವಾರ್ಷಿಕ ಆದಾಯವನ್ನು ಪಡೆದು ಹೊಸ ಭೂಸ್ವಾಧೀನ ಕಾಯ್ದೆ-2013 ರನ್ವಯ ಕ್ರಮ ಕೈಗೊಳಲಾಗುವುದು.
7. ಪಾವಗಡ ಗ್ರಾಮದ ಪ್ರಕರಣಗಳ ಕಲಂ 11(1)ರ ಅಧಿಸೂಚನೆಯ ಅನ್ವಯ ಭೂಸ್ವಾಧೀನಕ್ಕೆ ಒಳಪಡುವ ಕ್ಷೇತ್ರವು 100 ಎಕರೆಗಿಂತ ಕಡಿಮೆ ಇರುವುದರಿಂದ ಹೊಸ ಭೂಸ್ವಾಧೀನ ಕಾಯ್ದೆಯ ಕಲಂ 45ರ ನಿಂಬಂದನೆಗಳಿಗೆ ಅನುಸಾರವಾಗಿ ಕ್ರಮವಹಿಸಲಾಗಿ ಒಟ್ಟು ಎರಡು ಖಾತೆಗಳಿಂದ 02 ಕುಟುಂಬಗಳನ್ನು ಗುರುತಿಸಲಾಗಿರುತ್ತದೆ. ಈ ಬಗ್ಗೆ ದಿನಾಂಕ: 24.05.2018ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದಂತ ಆರ್ & ಆರ್ ಕಮಿಟಿಯ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ.
8. ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ಕಾಯ್ದೆ, ಕಾನೂನು, ನಿಯಮಗಳ ಅನ್ವಯ ಸದರಿ ಕರಡು ಯಾದಿಯು ಬದಲಾವಣೆಗೆ ಒಳಪಟ್ಟಿರುತ್ತದೆ.
9. ಪರಿಹಾರ ದನ ಪಾವತಿ ಸಮಯದಲ್ಲಿ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಒಟ್ಟು ಭೂಹಿಡುವಳಿ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ಕ್ರಮ ಜರಗಿಸಲಾಗುತ್ತದೆ.
10. ತುಮಕೂರು-ರಾಯದುರ್ಗ ರೈಲ್ವೆ ಯೋಜನೆಯಡಿ ಭಾದಿತಗೊಳ್ಳುವ ಕುಟುಂಬಗಳಿಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಅಧಿನಿಯಮ-2013 (The Right to Fair Compensation, Transparency in Land Acquisition Rehabilitation and Resettlement Act-2013) ಸದರಿ ಅಧಿನಿಯಮದ ಅನುಸಾರ ಈ ಯೋಜನೆಯ ಭೂಸ್ವಾಧೀನದಿಂದಾಗಿ ಒಟ್ಟು ಎರಡು ಖಾತೆಗಳಿಂದ ಎರಡು ಕುಟುಂಬಗಳ ಸಂತ್ರಸ್ಥರನ್ನು ಹೊರತುಪಡಿಸಿ ಉಳಿದ ಯಾವ ಕುಟುಂಬವು ಸಹ ಶೇಕಡ 50ಕ್ಕಿಂತ ಹೆಚ್ಚಿನ ಭೂಮಿ ಕಳೆದು ಕೊಂಡಿರುವುದಿಲ್ಲವಾಗಿದೆ.

(signature)
ವಿಶೇಷ ಭೂಸ್ವಾಧೀನಾಧಿಕಾರಿ,
ತುಮಕೂರು-ರಾಯದುರ್ಗ ಹಾಗೂ
ತುಮಕೂರು-ದಾವಣಗೆರೆ ರೈಲ್ವೆ ಯೋಜನೆ,
ತುಮಕೂರು.

Anitha C
ಆಡಳಿತಾಧಿಕಾರಿಗಳು,
ಪುರ್‌ವಸತಿ ಮತ್ತು ಪುನರ್‌ನಿರ್ಮಾಣ,
ಹಾಗೂ ಅಪರ ಜಿಲ್ಲಾಧಿಕಾರಿ,
ತುಮಕೂರು.

**ಪ್ರಸ್ತಾವನೆ:**

ಪಾವಗಡ ತಾಲ್ಲೂಕು, ಪಾವಗಡ ಗ್ರಾಮದ ಸರ್ವೆ ನಂಬರ್‌ಗಳಾದ: 320, 321, 334, 500, 477, 476, 475, 474, 303/1, 303/2, 303/3, 303/4, 303/5, 303/6, 303/7, 228/1, 228/2. 230/1, 190/1, 190/2, 429, 427, 424, 428, 191/2ಎ, 189/1, 189/2, 189/4, 189/5, 189/6, 189/7, 207, 208/2, 283/2ಎ, 301/5, 304/1, 252/2, 229/4, 229/5, 284/3, 284/4, 299/7, 206/2, 206/3, 206/4, 283/2ಬಿ 498, 305, 319, 484.

ಈ ಮೇಲ್ಕಂಡಂತೆ ಪಾವಗಡ ಗ್ರಾಮದ ಒಟ್ಟು 50 ಸರ್ವೆ ನಂಬರ್‌ಗಳಲ್ಲಿ ಭಾದಿತಗೊಳ್ಳುವ ಕುಟುಂಬಗಳ ಜಮೀನುಗಳು (ಎರಡು ಕುಟುಂಬಗಳನ್ನು ಹೊರತುಪಡಿಸಿ) ಶೇ. 50% ಕಿಂತ ಕಡಿಮೆ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿರುವುದರಿಂದ, ಸದರಿ ಕುಟುಂಬಗಳ ಜೀವನೋಪಾಯ ಮುಖ್ಯ ಆಧಾರ (Primary Source of Livelihood) ಕ್ಕೆ ಯಾವುದೇ ದಕ್ಕೆ ಉಂಟಾಗುವುದಿಲ್ಲವೆಂದು ತೀರ್ಮಾನಿಸಲಾಗಿದೆ ಹಾಗೂ ಇವರಿಗೆ ಪುನರ್‌ವಸತಿ ಅವಶ್ಯಕತೆ ಇರುವುದಿಲ್ಲವೆಂದು ಅಭಿಪ್ರಾಯ ಪಡಿಸಲಾಗಿದೆ.

ಈ ಭೂಸ್ವಾಧೀನ ಪ್ರಸ್ತಾವನೆಯಲ್ಲಿ ಪಾವಗಡ ಗ್ರಾಮದ ಎರಡು ಜಂಟಿ ಖಾತೆಯಲ್ಲಿನ ಎರಡು ಕುಟುಂಬಗಳನ್ನು ಹೊರತುಪಡಿಸಿ ಇತರೆ ಕುಟುಂಬಗಳು ಶೇಕಡ 50ಕ್ಕಿಂತ ಹೆಚ್ಚಿನ ಭೂಮಿ ಕಳೆದುಕೊಳ್ಳದೆ ಇರುವುದರಿಂದ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣದ ಸೌಲಭ್ಯಗಳನ್ನು ನೀಡುವ ಅನುಸೂಚಿ-31 (ಪರಿಶಿಷ್ಟ 11) ರ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.

ವಿಶೇಷ ಭೂಸ್ವಾಧೀನಾಧಿಕಾರಿ,
ತುಮಕೂರು-ರಾಯದುರ್ಗ ಹಾಗೂ
ತುಮಕೂರು-ದಾವಣಗೆರೆ ರೈಲ್ವೆ ಯೋಜನೆ,
ತುಮಕೂರು.

Anitha C.
ಆಡಳಿತಾಧಿಕಾರಿಗಳು,
ಪುರ್‌ವಸತಿ ಮತ್ತು ಪುನರ್‌ನಿರ್ಮಾಣ,
ಹಾಗೂ ಅಪರ ಜಿಲ್ಲಾಧಿಕಾರಿ,
ತುಮಕೂರು.